

## ಪ್ರಭಾಕರನ್ ಪಳಸ್ಸಿ

ಮಲಯಾಳಂನ ಪ್ರಸಿದ್ಧ ಬರಹಗಾರರಲ್ಲೊಬ್ಬರು. ಕೇರಳದ ಕಣ್ಣೂರು ಜಿಲ್ಲೆಯ ಐತಿಹಾಸಿಕ ಪ್ರಸಿದ್ಧವಾದ ಪಳಸ್ಸಿ ಊರಿನವರು. ಇಪ್ಪತ್ತೆಂಟು ವರ್ಷಗಳ ಕಾಲ ಉಪನ್ಯಾಸಕರಾಗಿ ಬೋಧಿಸಿರುವ ಅವರು, ಕೇರಳ ಸರ್ಕಾರದ ಮಲಯಾಳಂ ಮತ್ತು ಸಂಸ್ಕೃತಿ ಪ್ರಕಾಶನದ ಸಂಪಾದಕರಾಗಿ, ಸಂಗೀತ ನಾಟಕ ಅಕಾಡೆಮಿ ಕಾರ್ಯದರ್ಶಿಯಾಗಿ, ರಾಜ್ಯ ಸಾಕ್ಷರತಾ ಮಿಷನ್ ಅಥಾರಿಟಿಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಕೇರಳ ಸರ್ಕಾರದ ಅಪೆಕ್ಸ್ ಕೌನ್ಸಿಲ್‌ನ ಸಾಂಸ್ಕೃತಿಕ ಕಾರ್ಯದರ್ಶಿ. ಆರು ಕಥಾಸಂಕಲನ, ಆರು ಬಾಲಸಾಹಿತ್ಯ ಕೃತಿಗಳು ಹಾಗೂ ಮೂರು ಜೀವನಚರಿತ್ರೆಗಳನ್ನು ಪ್ರಕಟಿಸಿದ್ದಾರೆ. 'ವಸೂರಿಮಾಲ' ಅವರ ಇತ್ತೀಚಿನ ಕಾದಂಬರಿ. ಪ್ರಭಾಕರನ್ ಅವರ ಅನೇಕ ಕಥೆಗಳು ಭಾರತದ ಇತರ ಭಾಷೆಗಳಿಗೆ ಅನುವಾದಗೊಂಡಿವೆ. 'ಚೆರುಕಾಡ್ ಪ್ರಶಸ್ತಿ', 'ಅಬುದಾಬಿ ಶಕ್ತಿ ಪ್ರಶಸ್ತಿ' ಸೇರಿದಂತೆ ಹಲವು ಗೌರವಗಳು ಅವರ ಸಾಹಿತ್ಯರಚನೆಗೆ ಸಂದಿವೆ.



## ಕೆ.ಕೆ. ಗಂಗಾಧರನ್

ಕಾಸರಗೋಡಿನ ಪಾತನಡುಕ್ಕ (ಕೋಟೂರು) ಗ್ರಾಮದಲ್ಲಿ ಜನನ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆ. ಅಂಚೆ ಇಲಾಖೆಯ ರೈಲ್ವೆ ಮೇಲ್ ಸರ್ವೀಸ್ ಉದ್ಯೋಗಿಯಾಗಿ ಅರಸೀಕೆರೆ, ತುಮಕೂರು, ಮೈಸೂರು, ಮಡಿಕೇರಿ ಹಾಗೂ ಬೆಂಗಳೂರುಗಳಲ್ಲಿ ವೃತ್ತಿಜೀವನ. ಮಲಯಾಳಂ ಮತ್ತು ಕನ್ನಡ ಸಾಹಿತ್ಯದ ನಡುವೆ ಸೇತುವಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಈವರೆಗೆ ಹತ್ತು ಕಾದಂಬರಿ, 10 ಕಥಾಸಂಕಲನ ಹಾಗೂ 4 ಆತ್ಮಚರಿತ್ರೆಗಳನ್ನು ಕನ್ನಡಕ್ಕೆ ತಂದಿದ್ದಾರೆ. ಮಲಯಾಳಂನ ಪ್ರಖ್ಯಾತ ಬರಹಗಾರರಾದ ತಕಳಿ ಶಿವಶಂಕರ ಪಿಳ್ಳೈ, ಎಂ.ಟಿ. ವಾಸುದೇವನ್ ನಾಯರ್, ಕಮಲಾದಾಸ್, ಎಂ. ಮುಕುಂದನ್, ಬಾಲಕೃಷ್ಣನ್ ಮಾಂಗಾಡ್, ವೈಕ್ಕಂ ಮುಹಮ್ಮದ್ ಬಷೀರ್ ಸೇರಿದಂತೆ ಹಲವರ ಬರಹಗಳನ್ನು ಕನ್ನಡದ ಪಡಸಾಲೆಗೆ ತಂದಿದ್ದಾರೆ. ಕುವೆಂಪು ಭಾಷಾ ಪ್ರಾಧಿಕಾರದ ಪುಸ್ತಕ ಪ್ರಶಸ್ತಿ ಹಾಗೂ ಗೌರವ ಪ್ರಶಸ್ತಿಗಳ ಪುರಸ್ಕೃತರು. ಈ ಸಂಚಿಕೆಯಲ್ಲಿ 'ಸುಧಾ'ದಲ್ಲಿ ಪ್ರಕಟಣೆ ಆರಂಭಿಸಿರುವ 'ಪಲಾಯನ' ಕಾದಂಬರಿ, ಗಂಗಾಧರನ್ ಅವರ ಅನುವಾದ ಪ್ರೌಢಿಮೆಗೆ ಉದಾಹರಣೆಯಂತಿದೆ.

ನನಗಿರುವುದು. ಸುತ್ತಮುತ್ತಲಿರುವ ಮನೆಗಳಲ್ಲಿ ನಾಯಿ ಹಡೆದಂತೆ ಏಳೆಂಟು ಮಕ್ಕಳಿರುತ್ತಾರೆ. ಆದರೆ ನಮ್ಮಪ್ಪನಿಗೆ ನಾವು ಮೂವರೇ ಹೆಚ್ಚು. ನಾನು ಹುಟ್ಟಿದನಂತರ ಒಂದು ಹೆಣ್ಣು ಬೇಕೆಂದು ಬಯಸಿದರಂತೆ. ಹಾಗೆ, ಎರಡನೆಯದು ಹೆಣ್ಣಾದಾಗ ಅದೃಷ್ಟವೆಂದುಕೊಂಡರು.

ಅಪ್ಪನಿಗೆ ನನಗಿಂತಲೂ ರುಕ್ಮಿಣಿಯ ಮೇಲೆಯೇ ಹೆಚ್ಚು ಪ್ರೀತಿ. 'ಉಗ್ಗಿಣಿ' ಎಂಬ ಅಪ್ಪನ ಕರೆಗೆ ಅವಳು ಓಡಿ ಬಂದು ಅಪ್ಪನ ಮಡಿಲಿನಲ್ಲಿ ಜಿಗಿದು ಕುಳಿತುಕೊಳ್ಳುತ್ತಾಳೆ. ಅವಳನ್ನು ಮುದ್ದು ಮಾಡುವಾಗ ನಾನು ಸಹಿಸುತ್ತಿರಲಿಲ್ಲ. ಆದರೆ ನನಗೆ ಆಗ ಒಂದರಿಂದ ಹದಿನಾರರ ತನಕವಿರುವ ಮಗ್ಗಿಯನ್ನು ಹಿಂದಕ್ಕೂ ಮುಂದಕ್ಕೂ ಹೇಳುವ ಶಿಕ್ಷೆ, ಕೆಂಪು ಲಕೋಟೆಯಲ್ಲಿ ತೂಕದ ಬಟ್ಟಲಿನ ಚಿತ್ರವಿರುವ ಕೂತ್ತೂರಿನ ವಿಸ್ತೃತ ಸ್ತೋತ್ರವನ್ನು ಬಾಯಿಪಾಠ ಮಾಡುವುದು ನನ್ನ ಅತ್ಯಂತ ದೊಡ್ಡ ಶತ್ರು. ಅಂಕೆಗಳಿಂದ ಮಾಡುವ ಕಸರತ್ತಷ್ಟೇ ಅಲ್ಲ, ಆ ಭೂತದ ಗೂಡಿನಲ್ಲಿ ನನ್ನನ್ನು ಹೆದರಿಸಲು ಇಟ್ಟಿದ್ದು! ಅಮಾವಾಸ್ಯೆ ಕಳೆದನಂತರ ಪ್ರತಿದಿನ ಚಂದ್ರನ ದರ್ಶನವಾದರೆ ಏನೇನು ಗುಣಾವಗುಣಗಳು ಇರುತ್ತವೆ ಎಂಬ ವಿವರವು ಅದರಲ್ಲಿತ್ತು. ಯಾವುದೋ ಒಂದು ವಿಶೇಷ ದಿನ ಚಂದ್ರನ ದರ್ಶನವಾದರೆ ಒಳ್ಳೆಯ ಹೆಂಡತಿ ಸಿಗುತ್ತಾಳಂತೆ. ಮತ್ತೊಂದು ದಿನ ಮರಣವೇ ಫಲ. ಸಾವಿನ ದಿನ ಯಾವುದೆಂದು ತಿಳಿಯದೇ ಇದ್ದುದರಿಂದ ಪ್ರತಿದಿನ ಚಂದ್ರನ ದರ್ಶನ ಪಡೆಯಲು ನಾನು ಭಯಪಡುತ್ತಿದ್ದೆ. ಅಂಕೆಗಳೆಲ್ಲಾ ನನಗೆ ಒಲಿದಿದ್ದರೂ ವಿಸ್ತೃತ ಬಾಯಿಪಾಠದ ಚಂದ್ರನ ದರ್ಶನದ ಫಲಗಳು ಹೆಚ್ಚುಕಾಲ ನನ್ನಲ್ಲಿ ಭಯವನ್ನು ಉಳಿಸಿಕೊಂಡಿತ್ತು.

ನನ್ನ ಹಳ್ಳಿಯಲ್ಲಿ ನನಗೆ ಅತ್ಯಂತ ಪ್ರಿಯವಾದ ವಸ್ತುವೆಂದರೆ ಅಚ್ಚುಮಾಮನ ಎತ್ತಿನಬಂಡಿ. ಹಾಗೆ ನೋಡಿದರೆ, ಅಚ್ಚುಮಾಮ ನನ್ನ ಖಾಸಾ ಮಾವನೇನೂ ಅಲ್ಲ. ಅಪ್ಪನೊಂದಿಗೆ ಗರಗಸದ ಕೆಲಸದಲ್ಲಿ ಜೊತೆಯಾಗಿದ್ದವರು. ಸ್ವಲ್ಪ ಅಂತರದಲ್ಲಿರಿಸಿ ಎರಡು ಮರದ ದಿಮ್ಮಿಗಳ ಮೇಲೆ ಎರಡು ಮರದ ಹಲಗೆಗಳನ್ನು ಜೋಡಿಸಿಟ್ಟು ಗರಗಸದಿಂದ ಸೀಳಬೇಕಾದ ಮರವನ್ನು ಅಪ್ಪ ಮತ್ತು ಅಚ್ಚುಮಾಮ ಇಟ್ಟರು. ಇಬ್ಬರೂ ಹಾರೆಯ ನೆರವಿನಿಂದ ತಳ್ಳಿ ತಳ್ಳಿ ಹತ್ತಿಸುತ್ತಾರೆ. ಮರವನ್ನು ಕುಯ್ಯುವುದು. ಕೆತ್ತಿ ನಯಮಾಡುವುದು ಕೊಡಲಿಯವರ ಕೆಲಸ. ಕಾಲಿನ ತಳದಲ್ಲಿ ಆಣಿಯಿರುವ ತೃಪ್ಪಯ್ಯಾರ್ಕ ಕೃಷ್ಣಣ್ಣ ಊರಿನ ಪ್ರಮುಖ ಕೊಡಲಿ ಕೆಲಸದವರು. ಅವರು ಊರಿನ ವಿಶೇಷಗಳನ್ನು ಹೇಳುತ್ತಾ ಮರದ ಮೇಲು ಹೊದಿಕೆಗಳನ್ನು ಕೆತ್ತಿ ನಯಗೊಳಿಸುತ್ತಾರೆ. ಕೆತ್ತಿದ ಹಲಸಿನ ಮರದ ವಾಸನೆಯಂತು ಮನಸ್ಸಿಗೆ ಮುದ ನೀಡುವ ಸುಗಂಧವೇ ಸರಿ!

ಮರದ ನಡುವಿನ ಸೀಳಿನಲ್ಲಿ ಬೆಣೆಯನ್ನು ತಳ್ಳಿ, ಅದರ ನಂತರ ಕಪ್ಪುದಾರದಿಂದ ಗುರುತು ಹಾಕುತ್ತಾರೆ. ಇಜ್ಜಲನ್ನು ಅರೆದು ಎಣ್ಣೆ ಬೆರೆಸಿ ಅದರಲ್ಲಿ ದಾರವನ್ನು ಅದ್ದುತ್ತಾರೆ. ಅದರ ನಂತರ ತೊಲೆ, ಮಂಚ, ಮೇಜು ಯಾವುದಕ್ಕೆ ಬೇಕೋ ಅದರ ಅಳತೆಗನುಗುಣವಾಗಿ ಕಪ್ಪುದಾರದ